# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಕಾಂತರಾಜು, ಹಿಂದಿನ ಕಾರ್ಯದರ್ಶಿ ಆಲಂಬಾಡಿ ಕವಲು ಗ್ರಾಮ ಪಂಚಾಯಿತಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14ಎ ಅಡಿಯಲ್ಲಿ ಮಾನ್ಯ ಉಪಲೋಕಯುಕ್ತರಿಗೆ ವಹಿಸುವ ಬಗ್ಗೆ – ಆದೇಶ.

**ಓದಲಾಗಿದೆ:**

ಸ್ವೀಕೃತಿಸಂಖ್ಯೆ:ಅ.ಸ.ಪ.ಸಂ/ಕಂಪ್ಲೇಂಟ್/ಉಪಲೋಕ್/ಎಮ್‌ವೈಎಸ್–301/2007/ಡಿಆರ್‌ಇ–2, ದಿನಾಂಕ:25.04.2019.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ನಿಬಂಧಕರು ಕರ್ನಾಟಕ ಲೋಕಾಯುಕ್ತ ಇವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಸೆಕ್ಷನ್ 12(3) ರ ಅಡಿಯಲ್ಲಿ ಸಲ್ಲಿಸಿರುವ ದಿನಾಂಕ: 16.04.2019 ರ ವರದಿಯಲ್ಲಿ ಈ ಕೆಳಗಿನಂತೆ ತಿಳಿಸಿರುತ್ತಾರೆ.

ಶ್ರೀ ಕೆ.ಎಸ್. ಕರೀಗೌಡ ತಂದೆ ಸುಸೇಗೌಡ, ಆಲಂಬಾಡಿ ಕಾವಲು ಗ್ರಾಮ ಪಂಚಾಯಿತಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪುತ್ತಾರೆ) ತಮ್ಮ ದೂರಿನಲ್ಲಿ 1) ಶ್ರೀ ಪಿ. ಸಿದ್ದೇಗೌಡ, ಅಧ್ಯಕ್ಷರು, 2) ಕಾರ್ಯದರ್ಶಿ, 3) ಶ್ರೀ ಬಿ.ಕೆ. ನಾಗರಾಜು, ಕಾರ್ಯದರ್ಶಿ, 4) ಶ್ರೀ ಕಾಂತರಾಜು, ಹಿಂದಿನ ಕಾರ್ಯದರ್ಶಿ ಮತ್ತು 5) ಶ್ರೀ ಹೆಚ್. ಕೇಶವಮೂರ್ತಿ, ಹಿಂದಿನ ಕಾರ್ಯದರ್ಶಿ, ಅಲಂಭಾಡಿ ಕವಲು ಗ್ರಾಮ ಪಂಚಾಯಿತಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ (ಇನ್ನು ಮುಂದೆ 'ಎದುರುದಾರರು' 1 ರಿಂದ 5 ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ9 ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿರುತ್ತಾರೆ.

**ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ, ದೂರುದಾರರ ದೂರಿನಲ್ಲಿ ಅಲಂಬಾಡಿ ಕವಲು ಗ್ರಾಮ ಪಂಚಾಯಿತಿಯಲ್ಲಿ ಸೀಮೆ ಎಣ್ಣೆ ಮೋಟರು ಖರೀದಿ ಮತ್ತು ವಿತರಣೆಯಲ್ಲಿ ಅವ್ಯವಹಾರ, ಶ್ರೀಮತಿ ಪೂರ್ಣಿಮ ಕೋಂ ವಿಷಕಂಠಮೂರ್ತಿ ಅಲಂಬಾಡಿ ರವರ ಜಮೀನು ಅಭಿವೃದ್ಧಿ ಕಾಮಗಾರಿಯಲ್ಲಿ ಅವ್ಯವಹಾರ, ಅಲಂಬಾಡಿ ಗ್ರಾಮ ಪಂಚಾಯಿತಿಯಲ್ಲಿ ವಸತಿ ನಿರ್ಮಾಣಗೊಳ್ಳದೇ ಹಣ ಬಿಡುಗಡೆಗೊಳಿಸಿ ದುರುಪಯೋಗಪಡಿಸಿಕೊಂಡಿರುತ್ತಾರೆ. ಎಸ್.ಜಿ.ಆರ್.ವೈ. ಯೋಜನೆಯಡಿ ಅಕ್ಕಿ ದುರುಪಯೋಗ ಮತ್ತು ಯಾವುದೇ ಬಿಲ್ಲನ್ನು ಪಾಸು ಮಾಡದೇ ಅಭಿವೃದ್ಧಿ ಕಾಮಗಾರಿಯ ಹಣ ದುರುಪಯೋಗಪಡಿಸಿಕೊಂಡಿರುವುದಾಗಿ ಆಪಾದಿಸಿ ಎದುರುದಾರರ ವಿರುದ್ಧ ಸೂಕ್ತ ಕ್ರಮಕೈಗೊಳ್ಳಲು ಕೋರಿರುತ್ತಾರೆ.

ದೂರಿನ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಕೆ.ಆರ್.ಪೇಟೆ (ಇನ್ನು ಮುಂದೆ 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ರವರು ಸಲ್ಲಿಸಿರುವ ವರದಿಯಲ್ಲಿ 1) 2005–06ರಲ್ಲಿ ಮನೆ ನಿರ್ಮಾಣ ಮಾಡದಿದ್ದರೂ ಶ್ರೀಮತಿ ನಾಗರತ್ನಮ್ಮ ಗಂಡ ಸೋಮಶೇಖರ್ (ಗ್ರಾಮ ಪಂಚಾಯತಿ ಅಟೆಂಡರ್) ಇವರಿಗೆ ರೂ 25,000/–, ಶ್ರೀಮತಿ ಮಂಜುಳ ಗಂಡ ಚನ್ನಯ್ಯ ಇವರಿಗೆ ರೂ. 23,000/–, ಶ್ರೀಮತಿ ಮಂಜುಳ ಗಂಡ ಗಣೇಶ್ ಇವರಿಗೆ ರೂ. 25,000/–ಗಳನ್ನು ಮಂಜೂರು ಮಾಡಿರುತ್ತಾರೆ. ಮತ್ತು ಶ್ರೀಮತಿ ಗಂಗಮ್ಮ ಗಂಡ ರೇವಣ್ಣ ಇವರ ಮನೆ ನಿರ್ಮಾಣದಲ್ಲಿ ಹಂತದಲ್ಲಿ ಹೆಚ್ಚುವರಿಯಾಗಿ ರೂ. 7,000/–ಗಳ ಬಿಡುಗಡೆ ಮಾಡಿರುತ್ತಾರೆ. 2) ಎಸ್.ಜಿ.ಆರ್.ವೈ ಯೋಜನೆಯ ಖಾತೆ ಸಂಖ್ಯೆ 6411 ರಲ್ಲಿ ರೂ. 46,149/–ಗಳನ್ನು ಎನ್.ಎಂ.ಆರ್ ಕೂಲಿ ಬಾಬ್ತು ಮತ್ತು ಸಾಮಾಗ್ರಿ ಪೂರೈಕೆ ಬಿಲ್ಲುಗಳಿಗೆ ಪಾವತಿಸಲೆಂದು ವಿಜಯಾಬ್ಯಾಂಕಿನಿಂದ ಸ್ವಂತಕ್ಕೆ ಚೆಕ್ಕು ಹಾಕಿಕೊಂಡು ಡ್ರಾ ಮಾಡಿರುತ್ತಾರೆ ಆದರೆ ಕೂಲಿ ಕಾರ್ಮಿಕರಿಂದ ಎನ್.ಎಂ.ಆರ್ ಪುಸ್ತಕದಲ್ಲಿ ಸಹಿ ಪಡೆದಿರುವುದಿಲ್ಲ, ಬಿಲ್ಲುಗಳಲ್ಲಿ ಹಾಗೂ ಇನ್ನಿತರ ಕಾಮಗಾರಿಗಳಲ್ಲಿ ಅಧ್ಯಕ್ಷರು, ಕಾರ್ಯದರ್ಶಿಗಳ ಸಹಿ ಇರುವುದಿಲ್ಲ ಹಾಗೂ ಎಷ್ಟು ಮೊತ್ತದ ಬಿಲ್ಲು ಪಾವತಿಸಲಾಗಿದೆ ಎಂಬುದು ಯಾವುದೇ ಬಿಲ್ಲುಗಳಲ್ಲಿ ನಿಖರವಾದ ಮಾಹಿತಿ ಇರುವುದಿಲ್ಲ.

3) ಎಸ್.ಜಿ.ಎಸ್.ಆರ್.ವೈ ಯೋಜನೆಯಡಿ ಚೆಕ್ ಬುಕ್ ನಂ.398971 ರಿಂದ 398980 ರವರೆಗೆ ಸ್ವಂತಕ್ಕೆ ಚೆಕ್ಕು ಹಾಕಿಕೊಂಡು ರೂ.1,09,280/-ಗಳ ಹಣ ಡ್ರಾ ಮಾಡಿರುತ್ತಾರೆ ಇದಕ್ಕೆ ಸಂಬಂಧಿಸಿದಂತೆ ಯಾವುದೇ ಚೆಕ್ಕು ಲಭ್ಯವಿರುವುದಿಲ್ಲ. 4) 2006-07 ರಲ್ಲಿ ಎಸ್.ಜಿ.ವೈ ಯೋನಗೆಯಡಿ 51 ಕ್ವಿಂಟಲ್ ಅಕ್ಕಿಯನ್ನು ಬಿಡುಗಡೆ ಮಾಡಿರುವುದಾಗಿ ಸ್ಟಾಕ್ ಬುಕ್‌ನಲ್ಲಿ ನಮೂದಿಸಿರುತ್ತಾರೆ ಆದರೆ ಭೌತಿಕವಾಗಿ ಯಾವುದೇ ಅಕ್ಕಿ ಸಂಗ್ರಹವಿರುವುದಿಲ್ಲ ಈ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಕೇಶವಮೂರ್ತಿ ಹಾಗೂ ಶ್ರೀ ಸಿದ್ದೇಶ್, ಅಧ್ಯಕ್ಷರು ಕರ್ತವ್ಯಲೋಪವೆಸಗಿರುತ್ತಾರೆ. 5) ಗ್ರಾಮ ಪಂಚಾಯತಿಯಿಂದ ಕೊಟೇಷನ್ ಪಡೆಯದೇ ಶ್ರೀ ಲಕ್ಷ್ಮಿ ವೆಂಕಟೇಶ್ವರ ಎಲೆಕ್ಟ್ರಿಕಲ್ಸ್‌ನಲ್ಲಿ ಅಂಡ್ ಹಾರ್ಡ್‌ವೇರ್ಸ್‌ನಿಂದ ರೂ. 40,800/-ಗಳಿಗೆ 3 ಸೀಮೇಎಣ್ಣೆ ಮೋಟಾರುಗಳನ್ನು ಖರೀದಿಸಿರುತ್ತಾರೆ. ಮೋಟಾರ್‌ಗಳನ್ನು ಸ್ಟಾಕ್ ಮಾಡಲು ಪಡೆದಿಲ್ಲ ಮತ್ತು ಸ್ವಂತಕ್ಕೆ ಚೆಕ್ ಹಾಕಿಕೊಂಡು ಹಣ ಡ್ರಾ ಮಾಡಿರುತ್ತಾರೆ. ಆದರಿಂದ ಈ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಕಾಂತರಾಜು ಹಾಗೂ ಶ್ರೀ ಸಿದ್ದೇಶ್, ಅಧ್ಯಕ್ಷರು ಕರ್ತವ್ಯಲೋಪವೆಸಗಿರುತ್ತಾರೆ. 6) ಶ್ರೀಮತಿ ಪೂರ್ಣಿಮಾ ಕೊಂ ವಿಷಕಂಠಮೂರ್ತಿ ಆಲಂಬಾಡಿ ರವರ ಜಮೀನು ಮಟ್ಟ ಮಾಡಿದ ಕಾಮಗಾರಿಯಲ್ಲಿ ತುಂಡು ಗುತ್ತಿಗೆ ಕರಾರು ಮಾಡಿಕೊಂಡಿರುವುದಿಲ್ಲ, ಅಳತೆ ಮಾಡಿಸಿರುವುದಿಲ್ಲ, ಛಾಪಾ ಕಾಗದ ಎ.ವಿ.ಹರೀಶ್ ಹೆಸರಿನಲ್ಲಿದ್ದು, ಗುತ್ತಿಗೆದಾರ ಎ.ಎಸ್.ಪರಮೇಶ ಎಂದು ನಮೂದಿಸಿರುತ್ತಾರೆ ಸಹಿ ಇರುವುದಿಲ್ಲ ಚೆಕ್‌ಕೌಂಟರ್ ಫೈಲ್‌ನಲ್ಲಿ ಮೂರ್ಣಿಮ ಶ್ರೀಕಂಠಮೂರ್ತಿ ಹೆಸರಿದೆ. ಫಲಾನುಭವಿಯಿಂದ ಆರ್.ಟಿ.ಸಿ. ಪಡೆದುಕೊಂಡಿಲ್ಲ. ಆದರಿಂದ ಈ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಕೇಶವಮೂರ್ತಿ ಹಾಗೂ ಶ್ರೀ ಸಿದ್ದೇಶ್, ಅಧ್ಯಕ್ಷರು ಕರ್ತವ್ಯಲೋಪವೆಸಗಿರುತ್ತಾರೆ ಎಂದು ತಿಳಿಸಿರುತ್ತಾರೆ.

ದೂರಿಗೆ ಸಂಬಂಧಿಸಿದಂತೆ 3ನೇ ಎದುರುದಾರರಾದ ಶ್ರೀ ಬಿ.ಕೆ. ನಾಗರಾಜು, ರವರು ದಿನಾಂಕ: 23.01.2019 ರಂದು ಆಕ್ಷೇಪಣೆಯನ್ನು ಸಲ್ಲಿಸಿ ದಿನಾಂಕ: 03.01.2011 ರಂದು ಅವರು ವಯೋ ನಿವೃತ್ತಿ ಹೊಂದಿರುವುದಾಗಿ ಹಾಗೂ ಸದರಿಯವರ ಬಳಿ ಪ್ರಸ್ತುತಪಡಿಸಲು ಯಾವುದೇ ದಾಖಲಾತಿಗಳು ಇಲ್ಲವೆಂದು ಹಾಗೂ ಈ ಪ್ರಕರಣದಿಂದ ತಮ್ಮನ್ನು ಕೈಬಿಡುವಂತೆ ಕೋರಿರುವುದಾಗಿ ತಿಳಿಸಿತ್ತಾರೆ.

4ನೇ ಎದುರುದಾರರಾದ ಶ್ರೀ ಕಾಂತರಾಜು ರವರು ದಿನಾಂಕ: 11.12.2018 ರಂದು ಸಲ್ಲಿಸಿರುವ ತಮ್ಮ ಆಕ್ಷೇಪಣೆಯಲ್ಲಿ ಸೀಮೆ ಎಣ್ಣೆ ಮೋಟರು ಖರೀದಿಗೆ ಸಂಬಂಧಿಸಿದಂತೆ ತುಲನಾತ್ಮಕ ದರ ಪಟ್ಟಿಯನ್ನು ತಯಾರಿಸಿ, ಕಡಿಮೆ ದರ ನಿರ್ಧರಣೆಯೊಂದಿಗೆ ಶ್ರೀ ವೆಂಕಟೇಶ್ವರ ಎಲೆಕ್ಟ್ರಿಕಲ್ಸ್ ಅಂಡ್ ಹಾರ್ಡ್‌ವೇರ್ಸ್ ರವರಿಂದ ಖರೀದಿಸಲಾಗಿದೆ. ಶ್ರೀಮತಿ ಪೂರ್ಣಿಮ ಕೋಂ ವಿಷಕಂಠಮೂರ್ತಿ, ಅಲಂಬಾಡಿ ಕಾವಲು ರವರ ಜಮೀನು ಅಭಿವೃದ್ಧಿ ಕಾಮಗಾರಿ ನಂತರ ಸಹಾಯಕ ಇಂಜಿನಿಯರ್ ರವರು ಈ ಬಗ್ಗೆ ಪರಿಶೀಲನೆಯನ್ನು ನಡೆಸಿರುತ್ತಾರೆ ಬಿಲ್ ಪಾಸು ಮಾಡಿರುವುದಕ್ಕೆ ಸಂಬಂಧಿಸಿದಂತೆ ಎಂ.ಬಿ. ಪುಸ್ತಕದಲ್ಲಿ ನಮೂದಿಸಲಾಗಿದೆ. ಆದ್ದರಿಂದ ಪ್ರಕರಣದಿಂದ ಕೈಬಿಡುವಂತೆ ಕೋರಿರುವುದಾಗಿ ತಿಳಿಸಿತ್ತಾರೆ.

ದಿನಾಂಕ: 04-01-2012 ರಂದು 5ನೇ ಎದುರುದಾರರಾದ ಶ್ರೀ ಕೇಶವಮೂರ್ತಿ ರವರು ನಿಧನರಾಗಿರುತ್ತಾರೆ ಎಂದು ಮಂಡ್ಯ ಲೋಕಾಯುಕ್ತ ಪೋಲೀಸರು ವರದಿ ಸಲ್ಲಿಸಿರುತ್ತಾರೆ ಆದ್ದರಿಂದ ಇವರ ವಿರುದ್ಧ ಮುಂದಿನ ವಿಚಾರಣೆಯನ್ನು ಕೈಬಿಟ್ಟಿರುವುದಾಗಿ ಮಾನ್ಯ ಉಪ ಲೋಕಾಯುಕ್ತರು ವರದಿಯಲ್ಲಿ ತಿಳಿಸಿರುತ್ತಾರೆ.

4ನೇ ಎದುರುದಾರರಾದ ಶ್ರೀ ಕಾಂತರಾಜು, ಹಿಂದಿನ ಕಾರ್ಯದರ್ಶಿ, ಆಲಂಬಾಡಿ ಕಾವಲು ಗ್ರಾಮ ಪಂಚಾಯತಿ ಇವರ ವಿರುದ್ಧ ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ತಮ್ಮ ವರದಿಯಲ್ಲಿ ಈ ಕೆಳಗಿನಂತೆ ಶಿಫಾರಸ್ಸು ಸಲ್ಲಿಸಿರುತ್ತಾರೆ.

In respect of the allegations against Respondent No.4, R.4 has produced the credit bill for purchase of 3 kerosene motors. But the said credit bill does not bear the bill number and date and also the signature of authorized dealer. But it is shown that 3 kerosene motors are purchased for Rs.13,600/- each, totally costing Rs.40,800/- Respondent No.4 has produced cash receipts dated: 01.09.2006, but the same does not bear the KST number.

R.4 has produced the quotations of Laxmi Venkateshwara Electricals, Hitesh Electricals and Hardware, Rajan Electricals, who have quoted the rate of one kerosene motor as Rs.13,600/-, 13,975/- and Rs.13,600/- by Sri Laxmi Venkateshwara Electricals, But the quotation does not bear the signature of authorized dealer.
R.4 has also not produced the copy of the stock register. But the copy showing distribution of the kerosene motors is produced. R.4 has stated that he has paid the amount of R.40,800/- to the Sri Laxmi Venkateshwara Electricals by cash, which is not permissible. R.4 ought to have paid the amount through cheque. Thus R.4 has committed dereliction of duty and misconduct in purchase and distribution of kerosene motors.

Work was taken up for levelling land of Poornima W/o Vishakanta Murthy, under the scheme of development for Rs.15,415/-, an estimate was prepared for Rs.15,415/- and one As paramesha, the contractor had taken up the work. The contract certificate produced by R.4 does not bear the dated and the payment bill does not bear the signature of President of the Grama Panchayath. The MB produced does not find the check measurement by AEE.

ಆದ್ದರಿಂದ ಎದುರುದಾರರಾದ ಶ್ರೀ ಕಾಂತರಾಜು, ಹಿಂದಿನ ಕಾರ್ಯದರ್ಶಿ, ಅಲಂಬಾಡಿ ಕಾವಲು ಗ್ರಾಮ ಪಂಚಾಯಿತಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ ಇವರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ ನಿಯಮ 1957 ರ ನಿಯಮ 14(ಎ) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂಧು ಕಂಡುಬಂದಿರುವುದರಿಂದ, ಶ್ರೀ ಕಾಂತರಾಜು, ಹಿಂದಿನ ಕಾರ್ಯದರ್ಶಿ, ಅಲಂಬಾಡಿ ಕಾವಲು ಗ್ರಾಮ ಪಂಚಾಯಿತಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ ಇವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ)ನಿಯಮಾವಳಿ ನಿಯಮ 14(ಎ) ರನ್ವಯ ಇಲಾಖಾ ವಿಚಾರಣೆಯನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರನ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/251/ಗ್ರಾಪಂಕಾ/2019**
**ಬೆಂಗಳೂರು, ದಿನಾಂಕ: 11-06-2019.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಕಾಂತರಾಜು, ಹಿಂದಿನ ಕಾರ್ಯದರ್ಶಿ, ಅಲಂಬಾಡಿ ಕಾವಲು ಗ್ರಾಮ ಪಂಚಾಯಿತಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ-8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಬಾರಕ್ ಅಹ್ಮದ್) 11/6
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಮೂಲ ದಾಖಲೆಗಳನ್ನು ಇದರೊಂದಿಗೆ ಹಿಂದಿರುಗಿಸಿದೆ. ಪುಟ ಸಂಖ್ಯೆ: 1 ರಿಂದ 42).
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಮಂಡ್ಯ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಕೆ.ಆರ್.ಪೇಟೆ, ಮಂಡ್ಯ ಜಿಲ್ಲೆ.
6. ಶ್ರೀ ಕಾಂತರಾಜು, ಹಿಂದಿನ ಕಾರ್ಯದರ್ಶಿ, ಅಲಂಬಾಡಿ ಕಾವಲು ಗ್ರಾಮ ಪಂಚಾಯಿತಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
8. ಗಣಕ ಕೋಶ.